ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 23/1/21

ಸಚಿವರ ಖಾತೆ ಅದಲು ಬದಲು

ಅಸಮಾಧಾನ ತಣಿಸಿದ ಬಿಎಸ್‌ವೈ | ಅನಿವಾರ್ಯತೆ ಒಪ್ಪಿದ ಅತೃಪ್ತರು

23-1-2021

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನೂತನ ಸಚಿವರಿಗೆ ಖಾತೆಗಳ ಹಂಚಿಕೆ, ಕೆಲ ಸಚಿವರ ಖಾತೆ ಬದಲಾವಣೆ ಮಾಡಿದ್ದ 24 ತಾಸಿನಲ್ಲೇ ಸಿಎಂ ಬಿ.ಎಸ್.ಯಡಿಯೂರಪ್ಪ ಒತ್ತಡಕ್ಕೆ ಮಣಿದು, 6 ಸಚಿವರ ಖಾತೆಗಳನ್ನು ಅದಲು ಬದಲು ಮಾಡಿ, ಖಾತೆ ಕ್ಯಾತೆ ಶಮನಗೊಳಿಸಲು ಪ್ರಯತ್ನಿಸಿದ್ದಾರೆ.

ಖಾತೆ ಬದಲಾದ ವಿಚಾರ ತಿಳಿದು ಮುನಿಸಿ ಕೊಂಡಿದ್ದ ಸಚಿವ ಆರ್. ಶಂಕರ್ ಮನವೊಲಿಸಿ ಹಂಚಿದ ಖಾತೆಯಲ್ಲೇ ಮುಂದುವರಿಯುವಂತೆ ಒಪ್ಪಿಸಿದ್ದಾರೆ. ಖಾತೆ ವಿಚಾರವಾಗಿ ಸಿಎಂ ಜತೆಗೆ ಚರ್ಚಿಸುತ್ತೇವೆ ಎಂದು ಡಾ.ಕೆ.ಸುಧಾಕರ್ ಹೇಳಿಕೆ ನೀಡಿರುವ ಕಾರಣ ಅಸಮಾಧಾನಿತರ ಆಕ್ರೋಶ ಇನ್ನೂ ತಣ್ಣಗಾದಂತಿಲ್ಲ. ಸಿಎಂ ರವಾನಿಸಿದ್ದ ಪರಿಷ್ಕೃತ ಖಾತೆ ಪಟ್ಟಿಗೆ ರಾಜ್ಯಪಾಲರು ಶುಕ್ರವಾರ ಅಂಕಿತ ಹಾಕಿದ್ದು, ಅಧಿಸೂಚನೆ ಪ್ರಕಟವಾಗಿದೆ.

ಖಾತೆಗಳು ಬದಲಾವಣೆ: ಅಬಕಾರಿ ಖಾತೆ ಸ್ವೀಕರಿಸಲು ನಿರಾಕರಿಸಿದ್ದ ಎಂ.ಟಿ.ಬಿ.ನಾಗರಾಜ್ ಅವರಿಗೆ ಪೌರಾಡಳಿತ ಹಾಗೂ ಸಕ್ಕರೆ ಖಾತೆ ನೀಡಲಾಗಿದೆ. ಕೆ.ಗೋಪಾಲಯ್ಯ ಅವರಿಂದ ತೋಟಗಾರಿಕೆ, ಸಕ್ಕರೆ ಖಾತೆ ಹಿಂಪಡೆದು ಅಬಕಾರಿ ಖಾತೆ ಮುರು ಹಂಚಿಕೆ ಮಾಡಿ ಕೋಪಾವೇಶ ತಣ್ಣಗಾಗಿಸುವ ಪ್ರಯತ್ನ ಮಾಡಲಾಗಿದೆ. ಆರ್.ಶಂಕರ್ ಅವರಿಂದ ಪೌರಾಡಳಿತ ಖಾತೆ ವಾಪಸ್ ಪಡೆದು, ತೋಟಗಾರಿಕೆ ಹಾಗೂ ರೇಷ್ಮೆ ಖಾತೆ ನೀಡಲಾಗಿದೆ. ಮತ್ತೊಬ್ಬ 'ವಲಸಿಗ' ಸಚಿವ ಕೆ.ಸಿ.ನಾರಾಯಣ ಗೌಡಗೆ ಯುವಜನ ಸಬಲೀಕರಣ, ಕ್ರೀಡೆ ಜತೆಗೆ ಯೋಜನೆ, ಕಾರ್ಯಕ್ರಮ, ಸಾಂಖ್ಯಿಕ ಖಾತೆ ನೀಡಿ ಸಂತುಷ್ಟಗೊಳಿಸ ಲಾಗಿದೆ. ಜೆ.ಸಿ.ಮಾಧುಸ್ವಾಮಿಗೆ ವೈದ್ಯಕೀಯ ಶಿಕ್ಷಣ ಜತೆಗೆ ಹೆಚ್ಚುವರಿಯಾಗಿ ಹಜ್, ವಕ್ಫ್ ಖಾತೆ ನೀಡಿದ್ದು, ಅವರ ಬಳಿಯಿದ್ದ ಕನ್ನಡ ಮತ್ತು ಸಂಸ್ಕೃತಿ ಖಾತೆಯನ್ನು ಅರವಿಂದ ಲಿಂಬಾವಳಿಗೆ

ಜೆ.ಸಿ.ಮಾಧುಸ್ವಾಮಿ	ವೈದ್ಯಕೀಯ ಶಿಕ್ಷಣ, ಹಜ್ ಮತ್ತು ವಕ್ಫ್
ಅರವಿಂದ ಲಿಂಬಾವಳಿ	ಅರಣ್ಯ, ಕನ್ನಡ ಮತ್ತು ಸಂಸ್ಕೃತಿ
ಎಂಟಿಬಿ ನಾಗರಾಜ್	ಪೌರಾಡಳಿತ, ಸಕ್ಕರೆ
ಕೆ.ಗೋಪಾಲಯ್ಯ	ಅಬಕಾರಿ
ಆರ್.ಶಂಕರ್	ತೋಟಗಾರಿಕೆ, ರೇಷ್ಮೆ
ಕೆ.ಸಿ.ನಾರಾಯಣಗೌಡ	ಯುವಜನ ಸಬಲೀಕರಣ, ಕ್ರೀಡೆ, ಯೋಜನೆ, ಕಾರ್ಯಕ್ರಮ ಮೇಲ್ವಿಚಾರಣೆ, ಸಾಂಖ್ಯಿಕ

ಖಾತೆಗಳ ಮರು ಹಂಚಿಕೆ ನಂತರ ಕಾಂಗ್ರೆಸ್ ಬಿಟ್ಟು ಹೋದವರ ಸ್ಥಿತಿ ಅಧೋಗತಿ ಆಗಿದೆ. ಬಿಜೆಪಿಗೆ ಹೋಗುವುದಕ್ಕೆ ಮುನ್ನವೇ ಸಾಕಷ್ಟು ತಿಳಿ ಹೇಳಿದ್ದೇವು, ಕೇಳದೆ ಹೋದವರು ಈಗ ಉಸಿರಾಡಲು ಆಮ್ಲಜನಕ ತೆಗೆದುಕೊಳ್ಳುವ ಸ್ಥಿತಿಗೆ ಬಂದಿದ್ದಾರೆ. ಹಿಂದೆ ಬಿಜೆಪಿಗೆ ಹೋದವರಿಗೂ ಅದೇ ಸ್ಥಿತಿಯಾಗಿತ್ತು.

| ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ

ಹೆಚ್ಚುವರಿಯಾಗಿ ನೀಡಿ ಸಂತೈಸಿದ್ದು, ಅವರ ಬಳಿಯಿದ್ದ ಪರಿಸರ ಮತ್ತು ಜೀವಿಶಾಸ್ತ್ರ ಖಾತೆ ಹಿಂಪಡೆಯಲಾಗಿದೆ.

ಸಿಎಂ ನಿವಾಸಕ್ಕೆ ಶಂಕರ್: ಪೌರಾಡಳಿತ ಖಾತೆ ಹಿಂಪಡೆದ ವಿಷಯ ತಿಳಿದ ಆರ್.ಶಂಕರ್, ಸಿಎಂ ಅಧಿಕೃತ ನಿವಾಸ ಕಾವೇರಿಗೆ ಆಗಮಿಸಿ, ಪೌರಾಡಳಿತ ಖಾತೆಯೇ ಬೇಕು ಎಂದು ಪಟ್ಟುಹಿಡಿದರು. ಶಂಕರ್ ಮನವೊಲಿಸುವಲ್ಲಿ ಸಿಎಂ ಸಫಲರಾದರು. ಮಾತುಕತೆ ಬಳಿಕ ಶಂಕರ್ ಮಾತನಾಡಿ, ಮುಂದಿನ ದಿನಗಳಲ್ಲಿ ಬೇರೆ ಖಾತೆ ಜತೆಗೆ ಹಾವೇರಿ ಜಿಲ್ಲಾ ಉಸ್ತುವಾರಿ ಜವಾಬ್ದಾರಿ ಕೊಡುವ ಭರವಸೆಯನ್ನು ಸಿಎಂ ನೀಡಿದ್ದಾರೆ ಎಂದರು. ಈ ಮಧ್ಯೆ ಡಾ.ಕೆ.ಸುಧಾಕರ್‌ಗೆ ಇನ್ನೂ ಸಮಾಧಾನವಾದಂತಿಲ್ಲ.

ಖಾತೆಗಳ ಹಂಚಿಕೆ ಸಿಎಂ ವಿವೇಚನಾಧಿಕಾರ. ಅನಿವಾರ್ಯ ಪರಿಸ್ಥಿತಿಯಲ್ಲಿ ಕೆಲವೊಂದು ಬದಲಾವಣೆ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ಹೆಚ್ಚಿನ ಆದಾಯ ತರುವ ಅಬಕಾರಿ ಖಾತೆ ಕೊಟ್ಟಿದ್ದಾರೆ. ವಿಶ್ವಾಸವಿಟ್ಟು ನೀಡಿದ ದೊಡ್ಡ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವೆ.

| ಕೆ.ಗೋಪಾಲಯ್ಯ ಅಬಕಾರಿ ಸಚಿವ

ಆಡಳಿತ ವೈಫಲ್ಯದಿಂದ ಸಮಸ್ಯೆ ಆಗಬಾರದು. ಜನರ ಹಿತದೃಷ್ಟಿಯಿಂದ ಆರೋಗ್ಯ, ವೈದ್ಯಕೀಯ ಶಿಕ್ಷಣ ಇಲಾಖೆಗಳನ್ನು ಒಬ್ಬರಿಗೇ ನೀಡಬೇಕು. ಕರೊನಾ 2ನೇ ಅಲೆ ಬಂದರೆ ಸಿದ್ಧತೆ ಅಗತ್ಯ. ವ್ಯಾಕ್ಸಿನೇಷನ್ ನಡೆಯುತ್ತಿರುವ ಈ ಸಂದರ್ಭದಲ್ಲಿ ಮತ್ತು ತಜ್ಞರ ಪ್ರಕಾರ ಫೆಬ್ರವರಿಯಲ್ಲಿ ಎರಡನೇ ಅಲೆ ಸಾಧ್ಯತೆಗಳ ಸಂಬಂಧ ವೈಜ್ಞಾನಿಕ ಹಿನ್ನೆಲೆಯಲ್ಲಿ ನಿರ್ಧಾರ ಕೈಗೊಳ್ಳಬೇಕಿತ್ತು ಎಂಬುದು ನನ್ನ ಅಭಿಪ್ರಾಯ. ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು, ಅವರ ಕೈಬಲಪಡಿಸಲು ರಾಜಕೀಯ ಆತ್ಮಹತ್ಯೆಯಂತಹ ನಿರ್ಧಾರ ತೆಗೆದುಕೊಂಡಿದ್ದೇವೆ.

| ಡಾ.ಕೆ.ಸುಧಾಕರ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ